Sri Hari

# G.O.D. ಸತ್ಸಂಗ

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ



**ಮಹಾರಣ್ಯಂ**
**ಶ್ರೀ ಶ್ರೀ ಮುರಳೀಧರ ಸ್ವಾಮೀಜಿ**



**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ**
**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ**

ಮಾಧುರಿ ಸಖಿ ಸಮೇತ ಶ್ರೀ ಪ್ರೇಮಿಕ ವರದನ್ ಮತ್ತು
ಶ್ರೀ ಸದ್ಗುರುನಾಥರ ಪಾದಾರವಿಂದದಲ್ಲಿ
ಸಮರ್ಪಣೆ




**ಗ್ಲೋಬಲ್ ಆರ್ಗನೈಸೇಷನ್ ಫಾರ್ ಡಿವಿನಿಟಿ ಇಂಡಿಯಾ ಟ್ರಸ್ಟ್**

**ಕರ್ನಾಟಕ ನಾಮದ್ವಾರ**

ವಿಳಾಸ : ನಂ.ಟಿ4, 33ನೇ ಅಡ್ಡ ರಸ್ತೆ
ಜಯನಗರ 4ನೇ 'ಟಿ' ಬ್ಲಾಕ್ ಈಸ್ಟ್
ಬೆಂಗಳೂರು – 560 041.
**ಮೊಬೈಲ್** : 94495 92956
**ಇ-ಮೇಲ್** : contact@godindia.org
**ವೆಬ್‌ಸೈಟ್** : www.namadwaar.org

**ಶ್ರೀ ಹರಿಃ**

ಕಲಿಯುಗದಲ್ಲಿ ಎಲ್ಲ ರೀತಿಯ ದುರಿತಗಳಿಂದ ಬಿಡುಗಡೆ ಹೊಂದಿ ದೇವರ ಅನುಗ್ರಹ ಪಡೆಯಲು ದೇವರ ನಾಮ ಸಂಕೀರ್ತನೆಯೇ ಗತಿ ಎಂದು ಮದ್ವಾಚಾರ್ಯರು, ರಾಮಾನುಜಾಚಾರ್ಯರು, ಶಂಕರಾಚಾರ್ಯರು, ಚೈತನ್ಯ ಮಹಾಪ್ರಭು, ರಾಮಕೃಷ್ಣ ಪರಮಹಂಸರು, ಪುರಂದರದಾಸರು, ತುಕಾರಾಮ್, ನಾಮದೇವರು, ರಾಮದಾಸ್, ಮೀರಾ, ಶ್ರೀಯೋಗಿ ನಾರೇಯಣ ತಾತಯ್ಯನವರು, ಇನ್ನೂ ಅನೇಕ ಅವತಾರ ಪುರುಷರು, ಸಂತರು ಹಾಗೂ ಮಹಾತ್ಮರು ಒತ್ತಿ ಹೇಳಿದ್ದಾರೆ. ಅದೇ ರೀತಿ ನಮ್ಮ ಗುರುನಾಥರಾದ ಶ್ರೀ ಶ್ರೀ ಮುರಳೀಧರ ಸ್ವಾಮೀಜಿಯವರು ಮಹಾ ಮಂತ್ರ ಸಂಕೀರ್ತನೆ ಇಹಪರ ಲೋಕದಲ್ಲಿ ಸೌಖ್ಯವನ್ನು ನೀಡುತ್ತದೆ ಎಂದು ಉಪದೇಶ ಮಾಡಿಕೊಂಡು ಬರುತ್ತಿದ್ದಾರೆ.

ಮಹಾಮಂತ್ರ ಈ ಕಲಿಯುಗದಲ್ಲಿ ಬಹಳ ಪ್ರಸಿದ್ಧವಾಗಿ ಇರುವುದಕ್ಕೆ ಕಲಿಸಂತರ್ಣೋಪನಿಷತ್ ಆಧಾರವಾಗಿದೆ. ಎಲ್ಲರಿಗೂ ತಿಳಿಯುವಂತೆ ಕೆಲವು ವಿಷಯಗಳನ್ನು ನಮ್ಮ ಗುರುನಾಥರು ಹಲವು ಪ್ರವಚನಗಳಲ್ಲಿ ಹೇಳಿದ್ದಾರೆ.

ಆದ್ದರಿಂದ ಕೆಲವು ಮುಖ್ಯವಾದ ವಿಚಾರಗಳನ್ನು ಹಾಗೂ GOD ಸತ್ಸಂಗದ ಬಗ್ಗೆ ಎಲ್ಲರೂ ತಿಳಿಯುವಂತೆ ಈ ಚಿಕ್ಕ ಪುಸ್ತಕದಲ್ಲಿ ನಾವು ಸಂಗ್ರಹಿಸಿ ಅರ್ಪಿಸಿದ್ದೇವೆ.

**ರಾಧೇ ರಾಧೇ**



**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ**
**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ**

ಶ್ರೀಮನ್ನಾರಾಯಣನನ್ನು ಕರೆಯುವ ಮಂತ್ರ ಇದು. ಇದರಲ್ಲಿ ಹದಿನಾರು ನಾಮಗಳು ಇವೆ. ಒಂದೊಂದು ಪದಕ್ಕೂ ಬೇರೆ ಬೇರೆ ಅರ್ಥಗಳು ಇವೆ. ಒಂದೊಂದು ಜೀವಕ್ಕೂ ಹದಿನಾರು ಪದರ (ಆವರಣ)ಗಳು ಇವೆ. ಒಂದರ ಮೇಲೊಂದು ಪದರಗಳು ಈ ಜೀವಾತ್ಮವನ್ನು ಮುಚ್ಚಿಕೊಂಡಿರುತ್ತವೆ. ಸಂಸ್ಕೃತದಲ್ಲಿ ಇದಕ್ಕೆ ಆವರಣ ಎಂದು ಹೆಸರು. ಮೇಲೆ ಮುಚ್ಚಿರುವುದು **'ಆವರಣ'** **'ಷೋಡಷ'** ಎಂದರೆ ಹದಿನಾರು. ಈ ಹದಿನಾರು ಆವರಣಗಳನ್ನು ಬಿಡಿಸಿ, ಜೀವಕ್ಕೆ ಆನಂದವನ್ನು ಕೊಡುವುದೇ ಈ 'ಕಲಿಸಂತರಣ' ಮಹಾಮಂತ್ರದ ಈ ಕೆಳಗಿನ ಉಪನಿಷತ್ ವಾಕ್ಯಗಳು ಹೇಳುತ್ತವೆ.

**ಇತಿ ಷೋಡಷ ಕಲಾ ಆವೃತಸ್ಯ**
**ಜೀವಸ್ಯ ಆವರಣ ವಿನಾಶನ**



ಆಕಾಶದಲ್ಲಿನ ಮೋಡಗಳನ್ನು ಸರಿಸಿ ಸೂರ್ಯನು ಪ್ರಕಾಶಿಸುವಂತೆ, ಜೀವಾತ್ಮವನ್ನು ಮುಚ್ಚಿಕೊಂಡಿರುವ ಆವರಣಗಳನ್ನು ಬಿಡಿಸಿ, ಹೃದಯದಲ್ಲಿ ಪ್ರಕಾಶಿಸುವ ಭಗವಂತನ ರೂಪವನ್ನು ಕಂಡು ಆನಂದಿಸುವುದೇ ಪರಮಾನಂದ, ಇದನ್ನು ನೀಡುವುದು ಈ ಮಂತ್ರ.

**ತತಃ ಪ್ರಕಾಶತೇ ಪರಬ್ರಹ್ಮ**
**ಮೇಘಛಾಯೇ ರವಿರಶ್ಮಿ ಮಂಡಲೀವ ಇತಿ**

**ಪದಗಳು ಒಂದೇ, ಅರ್ಥಗಳು ಬೇರೆ**

ಈ ಮಂತ್ರದಲ್ಲಿ 'ರಾಮ' ಎನ್ನುವ ಪದ ನಾಲ್ಕು ಸಾರಿ, 'ಕೃಷ್ಣ' ಎನ್ನುವ ಪದ ನಾಲ್ಕು ಸಾರಿ, ಹರಿ ಎಂಬುದು 8 ಸಾರಿ ಬಂದಿದೆ. ಆಗ ಒಟ್ಟಿಗೆ ಹದಿನಾರು ಪದಗಳನ್ನು ಹೊಂದಿದೆ ಈ ಮಂತ್ರ. ಈ ಮಂತ್ರಶಾಸ್ತ್ರಗಳಲ್ಲಿ ಹೇಳುವ ಪ್ರಕಾರ ಒಂದೇ ಪದಕ್ಕೆ ಬೇರೆ ಬೇರೆ ಅರ್ಥಗಳನ್ನು ಸೂಚಿಸಬಹುದು. ಈ ಮಂತ್ರದಲ್ಲಿ ಒಂದೊಂದು ನಾಮವನ್ನೂ ಅಥವಾ ಹೆಸರನ್ನೂ ಉಚ್ಚರಿಸುವುದರಿಂದ ಅದರಲ್ಲಿ ಭಗವತ್ ಶಕ್ತಿ ಉಂಟಾಗುತ್ತದೆ. ಒಂದೊಂದು ನಾಮವೂ ಕೂಡ ಇಂಥ



ಶಕ್ತಿಯನ್ನು ಕೊಡುವ ದೇವರು. ನೀನು ನನ್ನ ಹತ್ತಿರ ಬಾ ಎಂಬ ಅರ್ಥವನ್ನು ಕೊಡುತ್ತದೆ. 'ಹರೇ' ಎಂದರೆ, ಓ ಹರಿಯೇ ಎಂಬ ಅರ್ಥವನ್ನು ಕೊಡುತ್ತದೆ. ಅದೇ ರೀತಿ 'ರಾಮ' ಎಂದರೆ ಓ ರಾಮನೇ, ಕೃಷ್ಣ ಎಂದರೆ ಓ ಕೃಷ್ಣನೇ ಎಂದು ಆ ನಾರಾಯಣನನ್ನು ಕರೆಯುವುದಾಗಿದೆ.

**ಮಂತ್ರಶಕ್ತಿ**

ಈ ಮಂತ್ರದಲ್ಲಿ ಒಂದು ಹೆಸರನ್ನು ಒಂದು ಸಾರಿ ಕರೆಯುವುದೇ ಒಂದರ್ಥ. ಆ ಹೆಸರನ್ನು ಪುನಃ ಕರೆಯುವುದೇ ಬೇರೆ ಬೇರೆ ಅರ್ಥ. ಕರೆಯುವಾಗ (ಈ ಮಂತ್ರವನ್ನು ಹೇಳುವಾಗ) ಆಯಾ ಅರ್ಥವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಜಪಸಿದರೆ ಆಯಾ ಮನೋಭಿಲಾಷೆಗಳನ್ನು ದೇವರು ನೆರವೇರಿಸುತ್ತಾನೆ. ಇದನ್ನು ಮಂತ್ರಶಕ್ತಿ ಎನ್ನುತ್ತಾರೆ.

## ಮಹಾಮಂತ್ರದಲ್ಲಿನ ಹದಿನಾರು ಪದಗಳ ಅರ್ಥಗಳು

1 **ಹರೇ** – ಮುಂದಿನ ಜನ್ಮವನ್ನು ಇಲ್ಲದಂತೆ ಮಾಡುವವನೇ ನೀನು ಬರುವೆಯಾ ?

2 **ರಾಮ** – ಶರೀರಾನಂದವನ್ನು ಕೊಡುವವನೇ ನೀನು ಬರಬೇಕು.

3 **ಹರೇ** – ಕಷ್ಟಗಳನ್ನು ಪರಿಹರಿಸುವವನೇ ನೀನು ಬಾ.

4 **ರಾಮ** – ನನ್ನನ್ನು ಸಂತೋಷಪಡಿಸುವವನು ನೀನು. ಶೀಘ್ರವಾಗಿ ಬರುವೆಯಾ ?

5. **ರಾಮ** – ಸ್ವರ್ದನೇ! ನಿನ್ನ ಸುಖಕ್ಕಾಗಿ (ಲಕ್ಷ್ಮಿದೇವಿ) ಅವಶ್ಯಕತೆಯಿಲ್ಲದೇ, ನಿನ್ನ ಸುಖಕ್ಕೆ ನೀನೇ ಕಾರಣವಾಗಿರುವೆ. ನೀನು ಬರಬೇಕು!

6 **ರಾಮ** – ಲಕ್ಷ್ಮಿದೇವಿಯನ್ನು ಸಂತೋಷಪಡಿಸುವವನೆ ನೀನು ಬಾ.

7 **ಹರೇ** – ನನ್ನ ಈ ಸ್ಥೂಲ ಶರೀರವನ್ನು ಅಳಿಸಿ ನನ್ನನ್ನು ಸ್ವೀಕರಿಸುವವನೆ, ನೀನು ಎಲ್ಲೇ ಇದ್ದರೂ ಬಾ!



8 **ಹರೇ** – ನನ್ನ ಮನಸ್ಸನ್ನು ಅಪಹರಿಸಿ ಒಳಗೆ ಇರುವ ಕಲ್ಮಶವನ್ನು ತೊಳೆಯುವವನೇ ನೀನು ಬಾ!

9 **ಹರೇ** – ನನ್ನ ಮನದಲ್ಲಿ ಇರುವ ದೊಡ್ಡ ಭಾರವನ್ನು ಇಳಿಸುವವನೇ ನೀನು ಬಂದು ಕೃಪೆ ತೋರಬೇಕು.

10 **ಕೃಷ್ಣ** – ಪರಿಪೂರ್ಣ ಅವತಾರನೇ ನೀನು ಬರಬೇಕು.

11 **ಹರೇ** – ಆನಂದವೇ ಒಂದು ರೂಪದಲ್ಲಿ ನಿಂತಿದ್ದರೆ ಅದು ಹೇಗೆ ಇರುವುದೋ ಆ ಆನಂದ ರೂಪನೇ ನೀನು ಬೇಗ ಬಾ.

12 **ಕೃಷ್ಣ** – ಯಾವ ಅಜ್ಞಾನದಿಂದಾಗಿ ನಾನು ನಿನ್ನ ಅರಿಯದೇ ಜೀವಿಸುತ್ತಿರುವೆನೋ, ಆ ಅಜ್ಞಾನವನ್ನು ನೀಗಿಸುವವನೇ ನೀನು ಬರಬೇಕು.

13 **ಕೃಷ್ಣ** – ಕಣ್ಣಲ್ಲೇ ಮರುಳು ಮಾಡುವವನೇ, ಸುಂದರ ಮೇಘಶ್ಯಾಮಲ ಮೂರ್ತಿಯೇ, ನಾನು ನಿನ್ನನ್ನು ನೋಡಬೇಕು.

14 **ಕೃಷ್ಣ** – ನನ್ನ ಪಾಪಗಳನ್ನು ಬೇರು ಸಮೇತ ಕಿತ್ತೊಗೆಯುವ ಶಕ್ತಿ ಹೊಂದಿರುವವನೇ ನೀನು ಬೇಗ ಬಂದು ಕೃಪೆ ಮಾಡುವಿಯಾ?



15 **ಹರೇ** – ಲಕ್ಷ್ಮಿದೇವಿಗೆ ಬಹಳ ಮನೋಹರವಾಗಿರುವವನೇ ನೀನು ನನಗೆ ಅನುಗ್ರಹ ಮಾಡಬೇಕು!

16 **ಹರೇ** – ನನ್ನ ಹೃದಯದಲ್ಲಿ ಯಾವಾಗಲೂ ನಿಂತು ನನ್ನನ್ನು ಸ್ವೀಕಾರ ಮಾಡು. ಪರಮಾನಂದವನ್ನು ನನಗೆ ನೀಡುವವನೇ, ಈಗಲೇ ನೀನು ನನಗೆ ಬೇಕು, ನೀನು ಎಲ್ಲಿಯೇ ಇದ್ದರೂ ಬರಬೇಕು!



## ಮಹಾಮಂತ್ರದ ಮಹಿಮೆ

ಈ ಜೀವನದಲ್ಲಿ ಉಂಟಾಗುವ ದುಃಖದಿಂದ ಬಿಡುಗಡೆ ಹೊಂದಲು, ಈ ಮಂತ್ರವನ್ನು ಬಿಟ್ಟು ಬೇರೆ ಮಾರ್ಗ ಇಲ್ಲ ಎಂದು ಉಪನಿಷತ್ ವಾಕ್ಯ ಈ ರೀತಿ ಹೇಳುತ್ತದೆ.

**ಇತಿ ಷೋಡಶಕಮ್ ನಾಮ್ನಾಂ**
**ಕಲಿ ಕಲ್ಮಶ ನಾಶನಮ್**
**ನಾ–ಅತಪ್–ಪರ–ದರ–ಉಪಾಯಃ**
**ಸರ್ವವೇದೇಷು ಪಠ್ಯತೇ**

ಆದ್ದರಿಂದ ಈ ಮಹಾಮಂತ್ರವನ್ನು ದಿನವೂ ಭಕ್ತಿಯಿಂದ ಜಪಿಸಿದರೆ ಸರ್ವಮಂಗಳಗಳೂ ಉಂಟಾಗುತ್ತವೆ ಎಂಬುದು ಉಪನಿಷತ್ ವಾಕ್ಯದ ತಾತ್ಪರ್ಯ.

ಮನಶ್ಯಾಂತಿಯಿಲ್ಲದೇ ಅನಾರೋಗ್ಯ, ವ್ಯಾಪಾರದಲ್ಲಿ ನಷ್ಟ, ಮದುವೆಯಲ್ಲಿ ಅಡೆತಡೆ, ಪುತ್ರಭಾಗ್ಯ ಇಲ್ಲದಿರುವುದು, ನಿರುದ್ಯೋಗ, ಹಣಕಾಸಿನ ತೊಂದರೆ ಹಾಗೇ ಕಷ್ಟಗಳು ಕೂಡ, ಮಹಾಮಂತ್ರ ಕೀರ್ತನೆಯಿಂದ ಸೂರ್ಯನ ಕಂಡ ಮಂಜಿನಂತೆ ಕರಗಿ ಹೋಗುವುದು ಖಂಡಿತ. (ಅಕಾಲಮೃತ್ಯು ಹೊಂದಿದವರಿಗೆ ಶಾಂತಿಯನ್ನು ಕೊಡುವುದು.)

ಮಹಾಮಂತ್ರ ಕೀರ್ತನೆ ಹೇಳುವವರನ್ನು ನವಗ್ರಹಗಳೂ ತೊಂದರೆ ಕೊಡುವುದಿಲ್ಲ. ಈ ಮಹಾಮಂತ್ರ ಕೀರ್ತನೆ ಮಾಡಿದರೆ ಹಿರಿಯರು ಶಾಂತಿಯನ್ನು ಪಡೆಯುವರು.

ಇದಲ್ಲದೇ ಈ ಮಂತ್ರವನ್ನು ಜಪಿಸಿದರೆ ತುಂಬಾ ಐಶ್ವರ್ಯ ಹೊಂದುತ್ತಾರೆ. ರೋಗಗಳು ಹತ್ತಿರ ಬರಲಾರವು. ಜೀವನದಲ್ಲಿ ದೇವರ ಕೃಪೆಯಿಂದ ಸಂತೋಷವು ತಾಂಡವವಾಡುತ್ತದೆ. ವ್ಯಾಪಾರವು ಅಭಿವೃದ್ಧಿ ಹೊಂದುತ್ತದೆ.

ನಮಗಲ್ಲದೇ, ನಮ್ಮ ಸಂಬಂಧಿಕರು, ಸ್ನೇಹಿತರು, ಬಂಧು ಬಳಗಗಳಿಗೆ ಒಳ್ಳೆಯದಾಗುವುದು. ಮನದಲ್ಲಿ ಯಾವಾಗಲೂ ಶಾಂತಿ ನೆಲೆಸುತ್ತದೆ. ಮನಸ್ಸು ಆರೋಗ್ಯ ಮತ್ತು ಶಾಂತಿಯಿಂದ ಇರುತ್ತದೆ.

ದೇಶದಲ್ಲಿ ಬಹಳ ಮಳೆ ಸುರಿಯುತ್ತದೆ. ಈ ನೆಲವನ್ನು ತಂಪಾಗಿಸುತ್ತದೆ. ಈ ನೆಲವು ಎಲ್ಲಾ ರೀತಿಯಲ್ಲೂ ಅಭಿವೃದ್ಧಿ ಆಗುತ್ತದೆ. ದೇಶದಲ್ಲಿ ಹಿಂಸೆ ಹೋಗಿ ಅಹಿಂಸೆ ನೆಲೆಯಾಗುತ್ತದೆ. ಲೋಕದಲ್ಲಿ ಏಕತಾಭಾವನೆ ಉಂಟಾಗುತ್ತದೆ. ಲೋಕ ಉದ್ಧಾರವಾಗುತ್ತದೆ. ಅಪರಿಮಿತವಾದ ಆಧ್ಯಾತ್ಮಿಕತೆಯು ಉಂಟಾಗುತ್ತದೆ. ಎಲ್ಲರಿಗೂ ಸುಲಭವಾಗಿ ದೇವರ ಅನುಗ್ರಹ ಸಿಗುತ್ತದೆ.



ಎಲ್ಲರಿಗೂ ಗುರು ಕೃಪೆ, ದೇವರ ಕೃಪೆ, ಸತ್ಸಂಗ ಸಿಗುತ್ತದೆ.

ಈ ಮಂತ್ರವನ್ನು ಶ್ರದ್ಧೆಯಿಂದ ಪ್ರತಿನಿತ್ಯ ಕೀರ್ತನೆ ಮಾಡಿ ಬರುವವರಿಗೆ ಕೃಷ್ಣ ಪರಮಾತ್ಮ ಮುಂದೆ ನಿಂತು ದಾರಿ ತೋರಿಸಿ ಕಾಪಾಡುತ್ತಾನೆ.

**ವಿಶೇಷ ಸೂಚನೆ :**

ಈ ಮಹಾಮಂತ್ರವನ್ನು ವಾರಕ್ಕೊಮ್ಮೆ 30 ನಿಮಿಷಗಳ ಕಾಲ ಸಾಮೂಹಿಕವಾಗಿ ನಿಮ್ಮ ಮನೆಯಲ್ಲಿ ಅಥವಾ ಗ್ರಾಮದ ದೇವಾಲಯದಲ್ಲಿ ನಾಮ ಸಂಕೀರ್ತನೆಯನ್ನು ಮಾಡುವುದರಿಂದ ದೇವರ ಸಾನಿಧ್ಯ ಹೆಚ್ಚಾಗಿ ನಿಮ್ಮ ಮನೆ ಹಾಗೂ ಗ್ರಾಮ ಸುಭೀಕ್ಷವಾಗಿರುತ್ತದೆ ಮತ್ತು ನಿಮ್ಮ ಎಲ್ಲಾ ಪ್ರಾರ್ಥನೆಗಳೂ ನೆರವೇರುತ್ತದೆ.

**ಮಹಾಮಂತ್ರ :**

**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ**
**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ**

ಈ ಮೇಲಿನ ಮಹಾಮಂತ್ರವನ್ನು ಪ್ರತಿನಿತ್ಯ 108 ಬಾರಿ ಜಪಿಸುವುದರಿಂದ ನಿಮ್ಮೆಲ್ಲಾ ಮನೋಭಿಲಾಷೆಗಳು ನೆರವೇರುತ್ತದೆ.



## G.O.D. ಸತ್ಸಂಗದಲ್ಲಿ ಹೇಳಬೇಕಾದ ಶ್ಲೋಕಗಳು ಮತ್ತು ಕೀರ್ತನೆಗಳು

ಗುರು ಶ್ಲೋಕ

ಕಲಯೇ ಸುಂದರಾಕಾರಂ ಸದ್ಯೆಕ ಪ್ರಿಯದರ್ಶನಂ
ಅಜ್ಞಾನ ನಾಶಕಂ ದೇವಂ ಸದ್ಗುರುಂ ಮುರಳೀಧರಮ್ ॥

ಮಾಧರೀ ಸಖಿ ಸಮೇತ ಶ್ರೀ ಪ್ರೇಮಿಕ ವರದನ್ ಶ್ಲೋಕ

ಮುರಳೀ ಮಂಡಿತ ಕರಕಮಲಂ
ಮುನಿಜನ ಮೋಹನಂ ವೆದ್ಯಸ್ತ
ಪಾದಂ ವನಮಾಲಾಧಾರಿಣಂ
ಪ್ರೇಮ ಭಕ್ತ ಮಂಡಲ ನಿತ್ಯಕೀರ್ತನಂ
ಪ್ರೇಮಿಕ ವರದಂ ಆಶ್ರಯೇಹಂ ॥

ಮಹಾಮಂತ್ರ

ಹರೇ ರಾಮ ಹರೇ ರಾಮ
ರಾಮ ರಾಮ ಹರೇ ಹರೇ
ಹರೇ ಕೃಷ್ಣ ಹರೇ ಕೃಷ್ಣ
ಕೃಷ್ಣ ಕೃಷ್ಣ ಹರೇ ಹರೇ ॥

30 ನಿಮಿಷಗಳ ಕಾಲ



## ಮಹಾರಣ್ಯಂ ಶ್ರೀ ಶ್ರೀ ಮುರಳೀಧರ ಸ್ವಾಮೀಜಿ ಅವರು ಅನುಗ್ರಹಿಸಿ ಹೇಳಿದ ಮಹಾಮಂತ್ರ ಕೀರ್ತನೆ

**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ**
**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ**

1. ಕಲಿಯನು ಬಲಿಗೊಳ್ವ ತುಸು ನಿಯಮವು ಇಲ್ಲದ
   ಕೀರ್ತನೆ ಹಾಡಿರಿ । ಕೀರ್ತನೆ ಹಾಡಿರಿ ।
   ॥ ಹರೇ ರಾಮ ॥

2. ಹದಿನಾರು ಕೋಶವನ್ನು ಬಿಡಿಸಿ ಮುಕುತಿ ನೀಡುವ
   ಹದಿನಾರು ಪದಗಳ ಕೀರ್ತನೆ ಹಾಡಿರಿ ।
   ॥ ಹರೇ ರಾಮ ॥

3. ಭೂಲೋಕದ ಬಯಕೆಗಳು – ಸ್ವರ್ಗದ ಆಸೆಗಳು
   ಕ್ಷಣದಲಿ ಗಳಿಸುವ ಕೀರ್ತನೆ ಹಾಡಿರಿ ।
   ॥ ಹರೇ ರಾಮ ॥

4. ಸಂಪತ್ತಿನ ವ್ಯಯವಿಲ್ಲದೆ ಕೃಪೆಯು ದೊರೆಕುವುದು
   ಗರ್ಭವಾಸ ಬರದಂತೆ ಕಾಯುವ ಕೀರ್ತನೆ ಹಾಡಿರಿ ।
   ॥ ಹರೇ ರಾಮ ॥

5. ಪಂಡಿತರಿಂದ – ಪಾಮರರವರೆಗೂ
ಬಳಿಸಾರಿ ಬದುಕಿಸುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

6. ಎಲ್ಲೇ ಚೆಲ್ಲಿದರೂ ರತ್ನವು ರತ್ನವೇ
ಹಿರಿಮೆಯಲ್ಲಿ ಹಿರಿಮೆಯಾದ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

7. ಲೋಕ ಜನರ ಉನ್ನತಿಗೆ ಒಂದು ದಾರಿ ತೋರಿಸುವ
ದುಃಖವನ್ನು ನೀಗಿಸುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

8. ಯೋಗವು, ಯಜ್ಞವು ತೀರ್ಥವು ದೈವವು
ನೆಲೆಸಿದ ನಾಮದ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

9. ಚಿದಾಕಾಶದಲ್ಲಿ ಹೊಳೆಯುವ ನಾಮವಿದು
ಯೋಗಸಿದ್ಧಿ ಬೆಳೆಸುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥



10. ಹಾಡುವ ಭಕ್ತರನ್ನು ಹಾಡುವ ಸ್ಥಳವನ್ನು
ಪಾವನಗೊಳಿಸುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

11. ಪಕ್ಷಿ–ಪ್ರಾಣಿ ತೃಣವು ಹೀಗೆ ಎಲ್ಲವೂ
ಪರಗತಿ ಹೊಂದುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

12. ದೇವರು ಕಾಣುವರು–ಭಗವಂತ ವಚನಿಸುವ
ಲೋಕವೇ ನಮಿಸುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

13. ಲೋಕಕೇ ತಿಳಿಸುವೆ ಎಂದು ಶಪಥ ಮಾಡಿದರು
ಅವರ ಶಪಥ ನೆರವೇರಲು ಕೀರ್ತನೆ ಹಾಡಿರಿ ।
॥ ಹರೇ ರಾಮ ॥

14. ಆಹಾರ ಬೇರೆಯಾದರೂ, ನೀರು ಒಂದೇ ಅಲ್ಲವೇ ?
ನೀರಿನಂಥ ಆಧಾರದ ಕೀರ್ತನೆ ಹಾಡಿರಿ ।
॥ ಹರೇ ರಾಮ ॥



15. ಇರುವ ಸ್ಥಳದಲ್ಲಿ ಇರುವ ಹಾಗೆಯೇ
ಬದುಕ್ಕನ್ನು ಬದಲಾಯಿಸುವ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

16. ಚೈತನ್ಯ ದೇವರೂ ನಿತ್ಯಾನಂದರೂ
ಭಕ್ತಿ ಪ್ರವಾಹ ಹರಿಸಿದ ಕೀರ್ತನೆ ಹಾಡಿರಿ ।
॥ ಹರೇ ರಾಮ ॥

**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ**
**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ**



## ಹನುಮಾನ್ ಆರತಿ

ಆಂಜನೇಯ ಆಂಜನೇಯ ಆಂಜನೇಯ ರಾಮ್
ಆಂಜನೇಯ ಆಂಜನೇಯ ಆಂಜನೇಯ ರಾಮ್
ಆಂಜನೇಯ ಆಂಜನೇಯ ಆಂಜನೇಯ ರಾಮ್
ಆಂಜನೇಯ ಆಂಜನೇಯ ರಾಮ್ – ವೀರ
ಆಂಜನೇಯ ಆಂಜನೇಯ ರಾಮ್

ಅಸಾಧ್ಯ ಸಾಧಕ ಸ್ವಾಮಿ – ವೀರ
ಆಂಜನೇಯ ಆಂಜನೇಯ ರಾಮ್
ಅದ್ಭುತ ಪರಾಕ್ರಮ ಧೀರ (2)
ಆಂಜನೇಯ ಆಂಜನೇಯ ರಾಮ್ – ವೀರ
ಆಂಜನೇಯ ಆಂಜನೇಯ ರಾಮ್

ರಾಮ ನಾಮಾಮೃತ ಪಾನ ರಸಿಕ
ಆಂಜನೇಯ ಆಂಜನೇಯ ರಾಮ್
ರಾಮ ನಾಮ ಜಪ ಭಕ್ತ ಪಾಲಕ (2)
ಆಂಜನೇಯ ಆಂಜನೇಯ ರಾಮ್ – ವೀರ

ಬುದ್ಧಿ ಬಲ ಯಶೋ ಧೈರ್ಯ ಸ್ವರೂಪಾ
ಆಂಜನೇಯ ಆಂಜನೇಯ ರಾಮ್
ಭೂತ ಪಿಶಾಚ ಅಭಿಚಾರ ನಾಶಕ (2)
ಆಂಜನೇಯ ಆಂಜನೇಯ ರಾಮ್ – ವೀರ

ಪವನ ಕುಮಾರಾ ಶಿವಾಂಶ ಧಾರಾ
ಆಂಜನೇಯ ಆಂಜನೇಯ ರಾಮ್
ಪಾಲಯ ಪಾಲಯ ಮುರಳೀಧರನುತ (2)
ಆಂಜನೇಯ ಆಂಜನೇಯ ರಾಮ್ – ವೀರ



## ಮಂಗಳ ಆರತಿ

ದೇವಕಿ ಬಾಲಾಯ ದೀನ ವತ್ಸಲಾಯ
ದೇವದೇವದಿ ರಾಜಶೇಖರಾಯ
ದಿವ್ಯ ಸ್ವರೂಪಾಯ ತೇಜೋಮಯಾಯತೇ
ಶ್ರೀಮತೇ ಪ್ರೇಮಿಕ ವರದಾಯ ಜಯ ಮಂಗಳಂ ನಿತ್ಯ
ಶುಭ ಮಂಗಳಂ ॥

ಲಲಿತ ಗುಣಾಲಾಯ ಲಾವಣ್ಯ ರೂಪಾಯ
ಲೀಲಾಯ ಮಾನುಷ ವೇಶಾಯ
ಲಕ್ಷ್ಮೀ ರಮಣಾಯ ರಾಧಿಕಾ ಲೋಲಾಯ
ಶ್ರೀಮತೇ ಪ್ರೇಮಿಕ ವರದಾಯ ಜಯ ಮಂಗಳಂ ನಿತ್ಯ
ಶುಭ ಮಂಗಳಂ ॥

ಭಾಗವತ ಪ್ರೀಯಾಯ ಭವದುಃಖ ಹರಣಾಯ
ಪಾಂಡವ ವಂಶ ಪೋಷಕಾಯ
ಮುರಳೀಧರ ಭಕ್ತ ಕಾಮಿತ ಪುನಿತಾಯ
ಶ್ರೀಮತೇ ಪ್ರೇಮಿಕ ವರದಾಯ ಜಯ ಮಂಗಳಂ ನಿತ್ಯ
ಶುಭ ಮಂಗಳಂ ॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬೃದ್ಧ್ಯಾತ್ಮನಾಭಾ ಪ್ರಕೃತೇಃ ಸ್ವಭಾವಾತ್
ಕರೋಮಿ ಯದ್ಯತ್ಸಕಲಂ ಪರಸ್ಮೈ
ಶ್ರೀ ಮನ್ನ ನಾರಾಯಣಾಯೇತಿ ಸಮರ್ಪಯಾಮಿ !



**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ**
**ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ**



**ಶ್ರೀ ಸುಂದರ ಆಂಜನೇಯ ಸ್ವಾಮಿ**

ಭಗವಂತನ ನಾಮವನ್ನು ಹೇಳುವುದು ನಮಗೆ ಒಳ್ಳೆಯದನ್ನು ಮಾಡುತ್ತದೆ. ಮನೆಗೂ, ನಾಡಿಗೂ, ಜಗತ್ತಿಗೂ, ಒಳ್ಳೆಯದನ್ನು ಮಾಡುತ್ತದೆ. ಭಗವಂತನ ಅನುಗ್ರಹವು ಹೊರಬರುತ್ತದೆ.

**ಮಹಾರಣ್ಯಂ ಶ್ರೀ ಶ್ರೀ ಮುರಳೀಧರ ಸ್ವಾಮೀಜಿ**

**KARNATAKA NAMADWAAR**
**GLOBAL ORGANISATION FOR DIVINITY INDIA TRUST**
T4, 33rd Cross, 4th T Block, Jayanagar, Bengaluru - 560 041
Contact : 94495 92956, 98450 22033
Email : contact@godindia.org
Web : www.namadwaar.org

**Central Administrative Office :**
**GLOBAL ORGANISATION FOR DIVINITY INDIA TRUST**
Plot No.11, Door No.4/11
Nethaji Nagar Main Road, Jafferkhanpet
Chennai - 600 083
Phone : 044 - 2371 8351